ದಿನಾಂಕ 27.01.2020 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು ಃ ಶ್ರೀ ವೈ.ಆರ್.ಬಿ. ವಕೀಲರಿಂದಃ**

ನಮ್ಮ ವಂಶದ ಮೂಲ ಪುರುಷ ಚಿಕ್ಕ ಯಲ್ಲಾಭೋವಿ ಎಂದರೆ ನನಗೆ ಗೊತ್ತಿಲ್ಲ, ಸದರಿ ಚಿಕ್ಕಯಲ್ಲಾಭೋವಿಯ ಮಗನ ಹೆಸರು ಆರುಬೆಳ್ ತಿಮ್ಮಭೋವಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಆರುಬೆಳ್ ತಿಮ್ಮಭೋವಿಯ ಹೆಂಡತಿಯ ಹೆಸರು ಕೊಲ್ಲಮ್ಮ ಎಂದರೆ ತಿಮ್ಮಕ್ಕ ಎನ್ನುತ್ತಾರೆ. ಆರುಬೆಳ್ತಿಮ್ಮಭೋವಿ ಮತ್ತು ಕೊಲ್ಲಮ್ಮ ಇವರಿಗೆ 3 ಜನ ಮಕ್ಕಳು, ಅವರುಗಳೆಂದರೆ ಆರುಬೆಳ್ ತಿಮ್ಮಜ್ಜ, ಕುಂಟ ರಾಮಯ್ಯ ಮತ್ತು ಆರುಬೆಳ್ ಯಲ್ಲಾಭೋವಿ ಎಂದರೆ ನನಗೆ ಗೊತ್ತಿಲ್ಲ.

2. ಆರುಬೆಳ್ ತಿಮ್ಮಜ್ಜನ ಹೆಂಡತಿಯ ಹೆಸರು ತಿಮ್ಮಕ್ಕ ಎಂದರೆ ಸರಿ. ಸದರಿ ತಿಮ್ಮಕ್ಕನಿಗೆ 3 ಜನ ಮಕ್ಕಳು, ಅವರುಗಳೆಂದರೆ ಹನುಮಂತಯ್ಯ ಅಲಿಯಾಸ್ ಹನುಮಂತ ಭೋವಿ, ಗಿಡ್ಡ ತಿಮ್ಮಯ್ಯ ಮತ್ತು ರಾಮಕೃಷ್ಣಪ್ಪ ಎಂದರೆ ಸರಿ. ಹನುಮಂತಯ್ಯ ಅಲಿಯಾಸ್ ಹನುಮಂತ ಭೋವಿಯ ಹೆಂಡತಿಯ ಹೆಸರು ಕರಿಯಮ್ಮ ಎಂದರೆ ಸರಿ. ಇವರಿಗೆ 3 ಜನ ಮಕ್ಕಳು, ಅವರುಗಳೆಂದರೆ ಗಣೇಶ (ವಾದಿ ಸಾಕ್ಷಿ-1), ಹನುಮಂತಯ್ಯ ಮತ್ತು ರಾಮ ಭೋವಿ ಎಂದರೆ ಸರಿ. ಗಿಡ್ಡ ತಿಮ್ಮಯ್ಯನವರ ಹೆಂಡತಿಯ ಹೆಸರು ಲಕ್ಷ್ಮಕ್ಕ ಎಂದರೆ ಸರಿ. ಇವರಿಗೆ 3 ಜನ ಮಕ್ಕಳು, ಅವರುಗಳೆಂದರೆ ನಾಗರಾಜು, ಕೃಷ್ಣ ಮತ್ತು ರಘು ಎಂದರೆ ಸರಿ.

3. ನನ್ನ ಚಿಕ್ಕಪ್ಪ ಗಿಡ್ಡತಿಮ್ಮಯ್ಯ ಈಗ ಬದುಕಿಲ್ಲ, ಅವರ ಹೆಂಡತಿ ಲಕ್ಷ್ಮಕ್ಕ ಬದುಕಿದ್ದಾರೆ. ಅವರ ಮಕ್ಕಳೆಲ್ಲರೂ ಜೀವಂತವಿದ್ದಾರೆ. ನನ್ನ ತಾಯಿ ಜೀವಂತವಿದ್ದಾರೆ. ರಾಮಕೃಷ್ಣಪ್ಪ ಜೀವಂತವಿದ್ದಾರೆ. ಸದರಿಯವರು ಶಿರಾ ತಾಲ್ಲೋಕಿನ ಬುಕ್ಕಾಪಟ್ಟಣ ಹೋಬಳಿಯ ಗಿಣ್ಣಪ್ಪನಹಟ್ಟಿ ಗ್ರಾಮದಲ್ಲಿ ವಾಸವಿದ್ದಾರೆ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.